**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ. 1565/2020**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ದಿನಾಂಕಃ** 21-09-2024 **ಡಿ.ಡಬ್ಲ್ಯೂ 1**

| | |
|---|---|
| ಹೆಸರು | ಅರುಣ ಕುಮಾರ |
| ತಂದೆ ಹೆಸರು | ಶಿವಪ್ಪ |
| ವಯಸ್ಸು | 39 ವರ್ಷ |
| ಉದ್ಯೋಗ | ಕಿರಾಣಿ ಅಂಗಡಿ |
| ವಾಸ ಸ್ಥಳ | ಕುರ್ಕಿ ಗ್ರಾಮ |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಪಿರ್ಯಾದಿ ಪರ ಶ್ರೀ ಎ ವಿ ಎಂ ವಕೀಲರಿಂದಃ**

ಪಿರ್ಯಾದಿ ನಾಗರಾಜ ನನಗೆ ಪರಿಚಯ ಇಲ್ಲ. ಅವರು ಯಾರು ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣ ದಾಖಲಾದ ನಂತರ ನಾನು ಸದರಿಯವರನ್ನು ನಾನು ನ್ಯಾಯಾಲಯದಲ್ಲಿ ನೋಡಿರುತ್ತೇನೆ. ಸದರಿ ನಾಗರಾಜ ರವರು ನನಗೆ ನೋಟೀಸ್ ನೀಡಿದ್ದರು. ಸದರಿಯವರು ನೀಡಿದ ನೋಟೀಸಿಗೆ ನಾನು ಅವರು ಯಾರು ನನಗೆ ಪರಿಚಯ ಇಲ್ಲ ಎಂದು ಮರುಉತ್ತರ ನೀಡಿದ್ದೇನೆ. ಸದರಿ ನಾಗರಾಜ ರವರು ನಾನು ಅವರಿಂದ 5 ಲಕ್ಷ ರೂ ಪಡೆದು ಅದನ್ನು ಮರುಪಾವತಿಸಲು ಚೆಕ್ಕನ್ನು ನೀಡಿದ್ದೇನೆ ಎಂದು ಸುಳ್ಳು ಹೇಳಿದ್ದಾರೆ. ಸದರಿ ಚೆಕ್ಕನ ಮೆಲಿರುವ ಸಹಿ ಕೂಡಾ ನನ್ನದಲ್ಲ. ಸದರಿ ಚೆಕ್ಕನ್ನು ನಾನು 2017 ರಲ್ಲಿ ಹಲಸಬಾಳು ಗ್ರಾಮ ಪೊಲೀಸ್ ಬಸವರಾಜ ತಂದೆ ಪೂಜಾರ ಹನುಮಂತಪ್ಪ ಎನ್ನುವವರಿಗೆ ನೀಡಿದ್ದೆನು. ಸದರಿಯವರು ಸದರಿ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ನಾಗರಾಜರವರ ಮೂಲಕ ಈ ಪ್ರಕರಣ ದಾಖಲಿಸಿರುತ್ತಾರೆ. ಇದೇ ರೀತಿ ನನ್ನ ಮತ್ತು ನನ್ನ ತಾಯಿಯ ಮೇಲೆ ಹಲವಾರು ಪ್ರಕರಣಗಳನ್ನು ದಾಖಲಿಸಿದ್ದಾರೆ.

ಸನ್ 2017 ರಲ್ಲಿ ನಾನು ಬಸವರಾಜ ಎನ್ನುವವರಿಂದ 3 ಲಕ್ಷ ರೂಗಳನ್ನು ಸಾಲವಾಗಿ ಪಡೆದಿದ್ದೆನು. ಅದರ ಭದ್ರತೆಗಾಗಿ ನನ್ನ ಮತ್ತು ನನ್ನ ತಾಯಿಯ ಕೆಲವು ಖಾಲಿ ಚೆಕ್ ಗಳನ್ನು (ಸಹಿ ಮಾಡದೇ ಇದ್ದ) ಭದ್ರತೆಗಾಗಿ ಅವರಿಗೆ ನೀಡಿದ್ದೆವು. 2019 ರಲ್ಲಿ ಸದರಿಯವರು ಭದ್ರತೆಗಾಗಿ ಚೆಕ್ ಬೇಡ ಎಂದು ನಮ್ಮ ಜಮೀನಿನ ಸರ್ವೆ ನಂ. 162/1 ರ ಖರೀದಿ ಕರಾರು ಪತ್ರವನ್ನು ಮಾಡಿಸಿಕೊಂಡರು. ಸದರಿ ಖರೀದಿ ಕರಾರು ಪತ್ರವನ್ನು ಬಸವರಾಜ ರವರು ಅವರ ತಂದೆ ಪೂಜಾರ ಹನುಮಂತಪ್ಪ ರವರ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ. ನಾವು ಸುಮಾರು ಬಾರಿ ಅವರನ್ನು ಚೆಕ್ ಗಳನ್ನು ಮರಳಿಸುವಂತೆ ಕೇಳಿದರೂ ಸಹ ಚೆಕ್ ಗಳನ್ನು ಮರಳಿಸಲಿಲ್ಲ. ಬಸವರಾಜ ರವರು ಚೆಕ್ ಗಳನ್ನು ಕೊಡುವುದಿಲ್ಲ ಜಮೀನನ್ನು ನಮಗೆ ಖರೀದಿ ಪತ್ರ ಮಾಡಿಕೊಡಿ ಆವಾಗ ನಾನು ಚೆಕ್ ಗಳನ್ನು ಮರಳಿ ಕೊಡುತ್ತೇನೆ ಎಂದು ಹೇಳಿದರು. ಅವರು ಚೆಕ್ ನ್ನು ಮರಳಿಸದೇ ಇದ್ದಾಗ ನಾನು 2019 ರಲ್ಲಿ ನನ್ನಬ್ಯಾಂಕ ಖಾತೆಗೆ ಚೆಕ್ ಗಳನ್ನು ನಗದೀಕರಣ ಮಾಡದಂತೆ ಅರ್ಜಿ ಸಲ್ಲಿಸಿರುತ್ತೇನೆ. ತದನಂತರದಲ್ಲಿ ಸದರಿ ಬಸವರಾಜ ರವರು ಈ ರೀತಿ ಪ್ರಕರಣಗಳನ್ನು ನಮ್ಮ ವಿರುದ್ಧ

ದಾಖಲಿಸಿರುತ್ತಾರೆ. ಸದರಿ ಬಸವರಾಜ ರವರು ಸರ್ಕಾರಿ ನೌಕರಾಗಿದ್ದರಿಂದ ಬೇರೆ ವ್ಯಕ್ತಿಗಳಿಂದ ಈ ರೀತಿ ಪ್ರಕರಣಗಳನ್ನು ದಾಖಲಿಸಿರುತ್ತಾರೆ.

ಸನ್ 2020 ರಲ್ಲಿ ಕೋವಿಡ್ ಇದ್ದು ನಾನು ಮತ್ತು ನನ್ನ ತಾಯಿ ಎಲ್ಲಿ ಹೋಗಿಲ್ಲ ಪಿರ್ಯಾದುದಾರರು ತಮ್ಮ ಪಿರ್ಯಾದಿಯಲ್ಲಿ ಹೇಳಿದ್ದು ಸುಳ್ಳು. ಪಿರ್ಯಾದಿ ತನ್ನ ಪಾಟೀ ಸವಾಲಿನಲ್ಲಿ ನಾನು ನನ್ನ ಟಾಟಾ ಸುಮೋ ವಾಹನದ ಸಾಲದ ಕಂತಿಗಾಗಿ ಹಣ ಪಡೆದಿದ್ದೇನೆ ಎಂದು ಹೇಳಿದ್ದಾರೆ ಆದರೆ ಸದರಿ ವಾಹನದ ಮೇಲಿನ ಸಾಲವನ್ನು ನಾನು 2019 ರಲ್ಲಿ ತೀರಿಸಿದ್ದೇನೆ. ನನಗೂ ಹಾಗೂ ಪಿರ್ಯಾದಿಗೂ ಯಾವುದೇ ರೀತಿಯ ಪರಿಚಯವಿಲ್ಲ. ಸದರಿಯವರ ಊರು ಯಾವುದು ಎಂದು ಗೊತ್ತಿಲ್ಲ. ಆ ಊರಿಗೆ ನಾನು ಹೋಗಿಲ್ಲ. ಸದರಿಯವರು ತಮ್ಮ ಪಾಟೀ ಸವಾಲಿನಲ್ಲಿ ಹೇಳಿದ ಮನೆತನದವರು ನಮ್ಮ ಊರಿನಲ್ಲಿ ಯಾರೂ ಇಲ್ಲ.

ಸಾಕ್ಷಿಯ ಮುಂದುವರೆದ ವಿಚಾರಣೆಗಾಗಿ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ